ಫೆಬ್ರವರಿ 04, ಶುಕ್ರವಾರ 2022

ಸಂಚಿಕೆ: 06 ಸಂಪುಟ: 04

ನುಡಿಸ್ಫೂರ್ತಿ

ಕಲ್ಪತರು ಟೈಮ್ಸ್

"ಉತ್ಸಾಹವಿಲ್ಲದೆ ಯಾವ ಮಹತ್ತರವಾದ ಕೆಲಸವೂ ನಡೆದಿಲ್ಲ.
– ಸುಭಾಷ್‌ಚಂದ್ರ ಬೋಸ್"

ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಸಂಚಿಕೆ । ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಚುಟುಕು ಸುದ್ದಿ

ಶೈಕ್ಷಣಿಕ ವೇಳಾಪಟ್ಟಿ ಪ್ರಕಟ

2021–22 ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಅದರಂತೆ ಮಾರ್ಚ್ 7 ಪದವಿ ತರಗತಿಗಳ ಪ್ರಸಕ್ತ ಸೆಮಿಸ್ಟರ್ ಮುಕ್ತಾಯಗೊಳ್ಳುತ್ತದೆ. ಮಾರ್ಚ್ 14ರಿಂದ ಪರೀಕ್ಷೆಗಳು ಆರಂಭವಾಗಲಿವೆ. ಹೆಚ್ಚಿನ ವಿವರಗಳಿಗೆ ಅಧ್ಯಾಪಕರು, ವಿದ್ಯಾರ್ಥಿಗಳು ತುಮಕೂರು ವಿವಿ ವೆಬ್‌ಸೈಟನ್ನು ಗಮನಿಸಬಹುದು.

ಪ್ರವೇಶ ಪತ್ರಿಕೆ ಪ್ರಕಟ

ಪ್ರಸಕ್ತ ಸಾಲಿನ ಎಂಬಿಎ ಪಿಜಿ ಸಿಇಟಿ ಪರೀ–ಕ್ಷೆಯ ಪ್ರವೇಶ ಪತ್ರಿಕೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಎಂಬಿಎ ವಿದ್ಯಾರ್ಥಿಗಳು ಪ್ರವೇಶ ಪತ್ರಿಕೆಯನ್ನು ಡೌನ್‌ಲೋಡ್ ಮಾಡಿಕೊಂಡು ಪರೀಕ್ಷೆಗೆ ಹಾಜರಾಗಲು ಸೂಚಿಸಲಾಗಿದೆ.

'ಸಂವಿಧಾನದಂತೆ ಮನಸ್ಸೂ ವಿಶಾಲವಾಗಿರಲಿ'

ತುಮಕೂರು: ನಮ್ಮ ದೇಶದ ಸಂವಿಧಾನ ವಿಶಾಲವಾಗಿರುವಂತೆ ನಮ್ಮ ಮನಸ್ಸು, ಸಂಸ್ಕೃತಿ, ನಡವಳಿಕೆ ವಿಶಾಲವಾಗಿರಬೇಕು ಎಂದು ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿ ಕರ್ನಲ್ (ಪ್ರೊ.) ವೈ. ಎಸ್. ಸಿದ್ದೇಗೌಡ ಅಭಿಪ್ರಾಯಪಟ್ಟರು.

ತುಮಕೂರು ವಿಶ್ವವಿದ್ಯಾನಿಲಯವು ಜನವರಿ 26ರಂದು ಆಯೋಜಿಸಿದ್ದ 73ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ದೇಶವನ್ನು ಒಗ್ಗೂಡಿಸುವ ಸಂದರ್ಭದಲ್ಲಿ ಭೌತಿಕವಾಗಿ ದೂರವಾಗಿ, ಬೌದ್ಧಿಕವಾಗಿ ಹತ್ತಿರವಾಗಿದ್ದೆವು. ಆದರೆ ಈಗ ಭೌತಿಕವಾಗಿ ಹತ್ತಿರವಾಗಿ, ಬೌದ್ಧಿಕವಾಗಿ ದೂರವಾಗಿದ್ದೇವೆ ಎಂದು ವಿಷಾದಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್ ಮಾತನಾಡಿ, ಎಷ್ಟೇ ಒಳ್ಳೆಯ ಸಂವಿಧಾನ ತಂದರೂ ಅದರ ಪರಿಣಾಮಕಾರಿ ಜಾರಿ ಆಗದಿದ್ದರೆ ಅದು ಸಾರ್ಥಕವಾಗುವುದಿಲ್ಲ ಎಂದು ತಿಳಿಸಿದರು.

ತುಮಕೂರು ವಿವಿ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಕುಲಪತಿ ಕರ್ನಲ್ (ಪ್ರೊ.) ವೈ. ಎಸ್. ಸಿದ್ದೇಗೌಡ, ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶ ರಾಘವೇಂದ್ರ ಶೆಟ್ಟಿಗಾರ್, ಕುಲಸಚಿವ ಪ್ರೊ. ಕೆ. ಶಿವಚಿತ್ತಪ್ಪ ಭಾಗವಹಿಸಿದರು. ಚಿತ್ರ: ದರ್ಶನ್ ಡಿ.ಎಸ್. ಪ್ರಥಮ ಎಂಎ–ಎಂಸಿಜೆ

ನಾವು ನೆಮ್ಮದಿಯಿಂದ ಬದುಕಲು ನಮ್ಮ ಸಂವಿಧಾನ ಕೊಟ್ಟಿರುವ ಮೂಲಭೂತ ಹಕ್ಕುಗಳೇ ಕಾರಣ. ಆದ್ದರಿಂದ ನಮ್ಮ ದೇಶ ಕರೆ ನೀಡಿದಾಗ ನಾವು ಯುದ್ಧಕ್ಕೂ ಸಿದ್ಧರಿರಬೇಕು ಎಂದರು.

ಪುಸ್ತಕದಲ್ಲಿರುವ ವಿದ್ಯೆ ನಮ್ಮ ಜೀವನದಲ್ಲಿ ಉಪಯೋಗಕ್ಕೆ ಬಾರದಿದ್ದರೆ ಅದು ನಿರರ್ಥಕವಾಗುತ್ತದೆ. ಈಗಿನ ಮಕ್ಕಳು ದೇಶದ ಹಿತದೃಷ್ಟಿಯಿಂದ ತುಂಬಾ ಮುಖ್ಯವಾಗಿದ್ದಾರೆ. ಆದರೆ ಅವರು ಮಾದಕ ದುಷ್ಟಟಗಳಿಗೆ ಬಲಿಯಾಗುತ್ತಿರುವುದು ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

ಕುಲಸಚಿವ ಪ್ರೊ. ಕೆ. ಶಿವಚಿತ್ತಪ್ಪ ಸ್ವಾಗತಿಸಿದರು. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಎ. ಎಂ. ಮಂಜುನಾಥ್ ವಂದಿಸಿದರು. ವಿವಿ ಸಾಂಸ್ಕೃತಿಕ ಘಟಕದ ಸಂಚಾಲಕ ಬಿ. ಕರಿಯಣ್ಣ ನಿರೂಪಿಸಿದರು.

ನಾಗೇಂದ್ರ ಕೆ. ಎಸ್., ಪ್ರಥಮ ಎಂಎ–ಎಂಸಿಜೆ

ಗಮನ ಸೆಳೆದ ಕರ್ನಾಟಕದ ಸ್ತಬ್ಧಚಿತ್ರ

73ನೇ ಗಣರಾಜ್ಯೋತ್ಸವ ಸಂಭ್ರಮದಲ್ಲಿ ರಾಷ್ಟ್ರರಾಜಧಾನಿ ನವದೆಹಲಿಯ ರಾಜಪಥದಲ್ಲಿ ನಡೆದ ಕವಾಯತಿನಲ್ಲಿ ಕರ್ನಾಟಕದ ಸ್ತಬ್ಧಚಿತ್ರ ಎಲ್ಲರ ಕಣ್ಮನ ಸೆಳೆಯಿತು.

ಬೆಂಗಳೂರಿನ ಅದಿತಿ ಉರಾಳ್ ನೇತೃತ್ವದಲ್ಲಿ ಸ್ತಬ್ಧಚಿತ್ರ ಪ್ರದರ್ಶನ ನಡೆದಿದ್ದು, ಅವರ ಜೊತೆ 12 ಕಲಾವಿದರು ಹೆಜ್ಜೆ ಹಾಕಿದರು.

ಕವಾಯತಿನಲ್ಲಿ ಜಾಗತಿಕ ಮಾನ್ಯತೆ ಗಳಿಸಿದ ಕರ್ನಾಟಕದ ವಸ್ತುಗಳನ್ನು ಸ್ತಬ್ಧಚಿತ್ರದಲ್ಲಿ ಪ್ರದರ್ಶಿಸಲಾಯಿತು. ಶಶಿಧರ ಅಡಪ ಕೈಚಳಕದಲ್ಲಿ ಈ ಸ್ತಬ್ಧಚಿತ್ರ ಅರಳಿದ್ದು, 'ಸಾಂಪ್ರದಾಯಿಕ ಕರಕುಶಲ ವಸ್ತುಗಳ ತೊಟ್ಟಿಲು' ಎಂಬ ವಿಷಯದ ಕುರಿತು ಈ ಸ್ತಬ್ಧಚಿತ್ರ ರೂಪಿಸಲಾಗಿತ್ತು. ಸ್ತಬ್ಧಚಿತ್ರದ ಮುಂಭಾಗದಲ್ಲಿ ಮೈಸೂರಿನ ಬೀಟೆ ಮರ ಹಾಗೂ ದಂತದ ಕೆತ್ತನೆಯ ಕಲಾಕೃತಿ, ಮಧ್ಯದಲ್ಲಿ ಕಣ್ಮನ ಸೆಳೆಯುವ ಬಿದರಿ ಕಲಾಕೃತಿ, ಕಿನ್ನಾಳ ಕಲಾ ವಸ್ತುಗಳು, ಕಂಚಿನ ಪ್ರತಿಮೆಗಳು, ಚೆನ್ನಪಟ್ಟಣದ ಮೆರುಗೆಣ್ಣೆಯ ಆಟಿಕೆಗಳು, ಯಕ್ಷಗಾನದ ಮಾದರಿ, ಭೂತಾರಾಧನೆ ವೇಳೆ ಬಳಸುವ ಕಂಚಿನ ಮುಖವಾಡ, ಮರಗೆತ್ತನೆ ಮತ್ತು ಕುಂಬಾರಿಕೆ ಹಾಗೂ ಹಿಂಬದಿಯಲ್ಲಿ ಪಾರಂಪರಿಕ ಕರಕುಶಲ ವಸ್ತುಗಳ ಜತೆಗೆ ಹಸ್ತಕಲೆಗಳ ಮಾತೆ ಕಮಲಾದೇವಿ ಇದ್ದಾರೆ. ಇವರು ಪಾರಂಪರಿಕ ಕರಕುಶಲ ಉತ್ಪನ್ನಗಳ ತಯಾರಿಕೆಗೆ ಪ್ರೋತ್ಸಾಹ ನೀಡಿದವರಾಗಿದ್ದಾರೆ.

'ಸಮಾಜದ ಒಳಿತಿಗಾಗಿ ಬದುಕೋಣ'

ತುಮಕೂರು: ನಿನಗಾಗಿ ನೀನು ಬದುಕುವುದು ಬದುಕಲ್ಲ; ಸಮಾಜದ ಒಳಿತಿಗಾಗಿ ಬದುಕುವುದೇ ಬದುಕು ಎಂದು ಹೇಳಿಕೊಟ್ಟವರು ವಿವೇಕಾನಂದರು. ಅವರ ವಿಚಾರಗಳನ್ನು ಯಾರು ತಮ್ಮ ಬದುಕಿಗೆ ಪೂರಕವಾಗುವಂತೆ ಹೆಚ್ಚು ಹೆಚ್ಚು ಬಳಸಿಕೊಳ್ಳುತ್ತಾರೋ, ಅವರೇ ಮುಂದೆ ಸಮಾಜದಲ್ಲಿ ಜಯಶೀಲರಾಗುತ್ತಾರೆ ಎಂದು ತುಮಕೂರು ವಿವಿ ಕುಲಪತಿ ಕರ್ನಲ್ (ಪ್ರೊ.) ವೈ. ಎಸ್. ಸಿದ್ದೇಗೌಡ ಹೇಳಿದರು.

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳು ಯುವಸಪ್ತಾಹ ಹಾಗೂ ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ಆಯೋಜಿಸಿದ್ದ ಚಿತ್ರಕಲಾಸ್ಪರ್ಧೆ ಹಾಗೂ ಚರ್ಚಾಸ್ಪರ್ಧೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೇ ವಿಷಯವನ್ನು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಮುಖ್ಯ ಎಂದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲೆ ಶಾಲಿನಿ ಬಿ.ಆರ್., ಯುವ ಸಬಲೀಕರಣವೇ ಸಪ್ತಾಹದ ಉದ್ದೇಶ. ವಿವೇಕಾನಂದರು ನಮಗೆಲ್ಲರಿಗೂ ಮಾದರಿ. ಯುವ ಸನ್ಯಾಸಿಯಾಗಿ ತನ್ನ ಭಾಷಣದ ಮೂಲಕ ಧಾರ್ಮಿಕತೆಯನ್ನು ಬಡಿದೆಬ್ಬಿಸಿದವರು ವಿವೇಕಾನಂದರು ಎಂದರು.

ವಿವಿ ವಿಜ್ಞಾನ ಕಾಲೇಜಿನ ಎನ್.ಎಸ್.ಎಸ್. ಘಟಕಗಳು ಆಯೋಜಿಸಿದ್ದ ಯುವಸಪ್ತಾಹದಲ್ಲಿ ಕುಲಪತಿ ಕರ್ನಲ್ (ಪ್ರೊ.) ವೈ. ಎಸ್. ಸಿದ್ದೇಗೌಡ, ಕುಲಸಚಿವ ಪ್ರೊ. ಕೆ. ಶಿವಚಿತ್ತಪ್ಪ, ಕಾಲೇಜಿನ ಪ್ರಾಂಶುಪಾಲೆ ಶಾಲಿನಿ ಬಿ. ಆರ್. ಭಾಗವಹಿಸಿದರು. ಚಿತ್ರ: ಮಾದೇವಿ ಎಸ್., ಪ್ರಥಮ ಎಂಸಿಜೆ

ನಾವು ಮಾರ್ಗದರ್ಶಕರನ್ನು ಹೊರಗೆಲ್ಲೋ ಹುಡುಕಬೇಕಾಗಿಲ್ಲ. ನಮ್ಮಲ್ಲಿ ಶಕ್ತಿ–ಸಂಯಮ, ಯುಕ್ತಿ ಇದ್ದರೇ ನಮ್ಮ ಹೊಸ ಮಾರ್ಗವನ್ನು ನಾವೇ ಸೃಷ್ಟಿಸಿಕೊಳ್ಳಬಹುದು. ಆ ಮಾರ್ಗದಲ್ಲಿ ನೂರಾರು ಜನರು ನಮ್ಮ ಹಿಂದೆ ಬರುತ್ತಾರೆ ಎಂದು ವಿವೇಕಾನಂದರು ನಂಬಿದ್ದರು. ಜ್ಞಾನ ಎನ್ನುವುದು ನಮ್ಮ ಮನಸ್ಸಿನ ಶಕ್ತಿಯನ್ನು, ಮೌಲ್ಯವನ್ನು ಹೆಚ್ಚಿಸುತ್ತದೆ ಎಂದರು.

ವಿವಿ ಕುಲಸಚಿವ ಪ್ರೊ. ಕೆ. ಶಿವಚಿತ್ತಪ್ಪ, ಎನ್.ಎಸ್.ಎಸ್. ಯೋಜನಾಧಿಕಾರಿ ಡಾ.ಜಿ.ಆರ್. ವಿಜಯ್ ಕುಮಾರ್, ಡಾ.ಎಚ್.ಎಂ ಲಲಿತಾ ಮತ್ತಿತರರು ಭಾಗವಹಿಸಿದ್ದರು.

ಭಾಸ್ಕರ ರಾಜು, ಪ್ರಥಮ ಎಂಎ–ಎಂಸಿಜೆ

ಪಿಎಚ್.ಡಿ. ಪದವಿ

ತುಮಕೂರು: ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಸುದೀಪ್ ಕುಮಾರ್ ಆರ್. ಅವರಿಗೆ ಚೆನ್ನೈಯಲ್ಲಿರುವ ತಮಿಳುನಾಡು ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಶ್ವವಿದ್ಯಾನಿಲಯವು ಪಿಎಚ್.ಡಿ. ಪದವಿ ನೀಡಿದೆ.

ಅವರು ಭಾರತಿಯಾರ್ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಪ್ರಾಧ್ಯಾಪಕ ಡಾ. ಕೆ. ಮುರುಗವೇಲ್ ಅವರ ಮಾರ್ಗದರ್ಶನದಲ್ಲಿ 'ಸ್ಟಡಿ ಆನ್ ಆಂಥ್ರೊಪೊಮೆಟ್ರಿಕ್ ಅಂಡ್ ಸೈಕಲಾಜಿಕಲ್ ಪ್ಯಾರಾಮೀಟರ್ಸ್ ಇನ್ ರಿಲೇಶನ್ ಟು ದೆಯರ್ ಅಚೀವ್‌ಮೆಂಟ್ಸ್ ಆಫ್ ಸೌತ್ ಜೋನ್ ಇಂಟರ್ ಯುನಿವರ್ಸಿಟಿ ವಾಲಿಬಾಲ್ ಪ್ಲೇಯರ್ಸ್' ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿ ಮಹಾಪ್ರಬಂಧ ಮಂಡಿಸಿದ್ದರು.

ಕಲಾ ಕಾಲೇಜಿನಲ್ಲಿ ಮತದಾರರ ದಿನ

ವಿವಿ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಹಮ್ಮಿಕೊಂಡಿದ್ದ 'ಮತದಾರರ ದಿನ'ದಲ್ಲಿ ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಡಾ. ಗುಂಡೇಗೌಡ ಮತ್ತಿತರರು ಇದ್ದಾರೆ.

ತುಮಕೂರು: 12ನೇ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ವಿಶ್ವವಿದ್ಯಾನಿಲಯ ಕಲಾ ಕಾಲೇಜಿನಲ್ಲಿ ಜ.25ರಂದು ಆಚರಿಸಲಾಯಿತು. ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಹಾಗೂ ಎನ್.ಎಸ್.ಎಸ್. ಘಟಕಗಳ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾ ಕಾಲೇಜಿನ ಪ್ರಾಂಶುಪಾಲ ಕೆ. ರಾಮಚಂದ್ರಪ್ಪ ಅಧ್ಯಕ್ಷೀಯ ನುಡಿಗಳನ್ನಾಡಿ ಮತದಾನದ ಮಹತ್ವವನ್ನು ತಿಳಿಸಿದರು.

ನಂತರ ಮತದಾರರ ಪ್ರತಿಜ್ಞಾ ವಿಧಿಯನ್ನು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಗುಂಡೇಗೌಡ ವಿದ್ಯಾರ್ಥಿಗಳಿಗೆ ಬೋಧಿಸಿದರು. 2011ರಿಂದ ಪ್ರತಿ ವರ್ಷ ಜನವರಿ 25ರಂದು ಮತದಾರರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. 1950ರ ಜನವರಿ 25 ಭಾರತದ ಚುನಾವಣಾ ಆಯೋಗವು ಸ್ಥಾಪಿತವಾದ ದಿನ. ಆಯೋಗವು ತನ್ನ ಸ್ಥಾಪನೆಯ ನೆನಪಿಗಾಗಿ ಆಚರಿಸಬೇಕಾದ ದಿನಾಚರಣೆಯನ್ನು ಮತದಾರರ ದಿನಾಚರಣೆಯನ್ನಾಗಿ ಪ್ರತಿ ವರ್ಷ ಆಚರಿಸಬೇಕು ಎಂದು ಇಚ್ಛಿಸಿದ ಕಾರಣ ಪ್ರತಿ ವರ್ಷ ಜನವರಿ 25ರಂದು ಮತದಾರರ ದಿನಾಚರಣೆಯನ್ನಾಗಿ ದೇಶದಾದ್ಯಂತ ಆಚರಿಸಲಾಗುತ್ತದೆ.

ರಾಜ್ಯಶಾಸ್ತ್ರ ವಿಭಾಗದ ಬೋಧಕವೃಂದ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಂಗನಾಥ ಮ., ತೃತೀಯ ಬಿ.ಎ. (ಜೆಕೆಪಿ)

ರಾಜ್ಯದಲ್ಲೊಂದು ಅಪೂರ್ವ ರೈತ ಹೋರಾಟ

ಇವರು 25 ವರ್ಷದಿಂದ ವಿದ್ಯುತ್ ಬಿಲ್ ಪಾವತಿಸಿಲ್ಲ!

ಅಸಮರ್ಪಕ ವಿದ್ಯುತ್ ಪೂರೈಕೆ ಖಂಡಿಸಿ ಕಳೆದ 25 ವರ್ಷಗಳಿಂದ ಮನೆಗಳ ವಿದ್ಯುತ್ ಬಿಲ್ ಪಾವತಿಸಿದೆ ಚಳುವಳಿ ನಡೆಸುತ್ತಿರುವ ಅಪರೂಪದ ಪ್ರಕರಣಕ್ಕೆ ತಿಪಟೂರು ತಾಲೂಕಿನ ತಿಮ್ಲಾಪುರ ಮತ್ತು ಲಕ್ಷ್ಮಗೊಂಡನಹಳ್ಳಿಯ 150 ಕ್ಕೂ ಹೆಚ್ಚು ರೈತ ಕುಟುಂಬಗಳು ಸಾಕ್ಷಿಯಾಗಿವೆ.



1995ರಿಂದಲೂ ವಿದ್ಯುತ್ ಬಿಲ್ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದು, ಚಳುವಳಿ ಮುಂದುವರೆದಿದೆ. ಪ್ರಸ್ತುತ 1.05 ಕೋಟಿ ರೂ ವಿದ್ಯುತ್ ಬಿಲ್ ಬಾಕಿ ಇದ್ದು ಅದನ್ನು ಕಟ್ಟಿಸಿಕೊಳ್ಳುವ ಬೆಸ್ಕಾಂಗೆ ಸವಾಲಾಗಿ ಪರಿಣಮಿಸಿದೆ.

ರಾಜ್ಯ ರೈತ ಸಂಘ ರೈತರ ಮನೆಗಳ ವಿದ್ಯುತ್ ಬಿಲ್ ಕಟ್ಟದಂತೆ ಕರೆ ನೀಡಿದ್ದ ಕರ ನಿರಾಕರಣ ಚಳುವಳಿ ಈಗ 25 ವರ್ಷ ಪೂರೈಸಿದೆ. ಅಂ–ದು ಗ್ರಾಮೀಣ ಭಾಗದಲ್ಲಿ ದಿನಕ್ಕೆ ಕೇವಲ 95 ನಿಮಿಷ ವಿದ್ಯುತ್ ಪೂರೈಕೆಯಾಗುತ್ತಿದ್ದರಿಂದ ಬೆಳೆ ಬೆಳೆಯಲಾಗಿದೆ, ಕಂಗಾಲಾಗಿದ್ದ ರೈತರು ಚಳುವಳಿ ಆರಂಭಿಸಿದ್ದರು. ಆದರೆ ತಿಪಟೂರು ತಾಲ್ಲೂಕಿನ ಈ ಹಳ್ಳಿಗಳು ಇಂದಿಗೂ ಅದನ್ನು ಮುಂದುವರೆಸಿರುವುದರಿಂದ ಪ್ರಸ್ತುತ ಸಂಧಾನಕ್ಕೆ ಬೆಸ್ಕಾಂ ಮುಂದಾಗಿದೆ. ತಿಮ್ಲಾಪುರದಲ್ಲಿ 88 ಲಕ್ಷ ರೂಪಾಯಿ ಮತ್ತು ಲಕ್ಷ್ಮಗೊಂಡನ ಹಳ್ಳಿಯಲ್ಲಿ 70 ಲಕ್ಷ ರೂಪಾಯಿ ವಿದ್ಯುತ್ ಬಿಲ್ ಬಾಕಿ ಇದೆ. ಪ್ರಸ್ತುತ ಎಲ್ಲಾ ಗ್ರಾಮಗಳಲ್ಲಿಯೂ ಸಮರ್ಪಕ ವಿದ್ಯುತ್ ಪೂ–ರೈಕೆಯಾಗುತ್ತಿದ್ದು ಚಳುವಳಿ ಕೈಬಿಟ್ಟು ಬಾಕಿಯ ಜೊತೆ ವಿದ್ಯುತ್ ಬಿಲ್ ಪಾವತಿಸಬೇಕು ಎಂದು ಬೆಸ್ಕಾಂ ಅಧಿಕಾರಿಗಳು ರೈತರ ಮನವರಿಕೆಗೆ ಮುಂದಾದ ಘಟನೆ ಈಚೆಗೆ ನಡೆಯಿತು.

ಭುವನಾ ಟಿ. ಎಸ್., ದ್ವಿತೀಯ ಎಂಎ–ಕನ್ನಡ

ಸಂಪಾದಕೀಯ

ನೈಜ ಸಾಧಕರಿಗೆ ಪದ್ಮಶ್ರೀ: ಸ್ತುತ್ಯರ್ಹ ನಡೆ




ಪದ್ಮಪುರಸ್ಕಾರ – ನಮ್ಮ ರಾಷ್ಟ್ರದ ನಾಗರಿಕರಿಗೆ ದೊರೆಯಬಹುದಾದ ಅತ್ಯುನ್ನತ ಪುರಸ್ಕಾರವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಎಲೆಮರೆಯ ಕಾಯಿಗಳಂತೆ ಸದ್ದಿಲ್ಲದೆ, ಶ್ರಮವಹಿಸಿ ಜನ ಸೇವೆಯ ಕಾಯಕದಲ್ಲಿ ತೊಡಗಿರುವ ಸಾಧಕರನ್ನು ಗುರುತಿಸಿ ಅವರಿಗೆ ರಾಷ್ಟ್ರಗೌರವ ನೀಡುವ ಸಂಪ್ರದಾಯ ಆರಂಭವಾಗಿದೆ. ಸರ್ಕಾರವು ಪದ್ಮಶ್ರೀಯನ್ನು ನೀಡುವ ಉದ್ದೇಶ ಪ್ರಜೆಗಳಲ್ಲಿ ಸೇವಾ ಮನೋಭಾವನೆ ಹಾಗೂ ದೇಶಭಕ್ತಿಯನ್ನು ಬಿತ್ತುವುದಾಗಿದೆ. ಪದ್ಮಪ್ರಶಸ್ತಿಗೆ ಜನಪ್ರಿಯತೆಯೊಂದೇ ಮಾನದಂಡವಲ್ಲ ಎಂಬ ಸಂದೇಶವನ್ನು ಸರ್ಕಾರ ರವಾನಿಸಿದೆ.

ಈ ಬಾರಿ ಐವರು ಕನ್ನಡಿಗರಿಗೆ ಗೌರವ ಸಂದಿದೆ. ಅವರ ವಿವರಗಳನ್ನು ಗಮನಿಸಿದರೆ ಯಾರಿಗೇ ಆದರೂ ಪ್ರಶಸ್ತಿಗಳ ಬಗ್ಗೆ ಗೌರವ ಮೂಡದಿರದು.

ಅಮೈ ಮಹಾಲಿಂಗನಾಯ್ಕ: ಮಂಗಳೂರು ಸಮೀಪದ ಕುಗ್ರಾಮ, ಅಮೈ ಎಂಬಲ್ಲಿನ ಗುಡ್ಡವನ್ನು ಏಕಾಂಗಿಯಾಗಿ ಕೊರೆದು ಏಳು ಸುರಂಗ ನಿರ್ಮಿಸಿ ಬರಡು ಭೂಮಿಗೆ ನೀರು ತಂದು ಅಡಿಕೆ, ತೆಂಗು, ಬಾಳೆ, ಗೋಡಂಬಿ, ಮೆಣಸು ಬೆಳೆದವರು ಇವರು. ಆಧುನಿಕ ಭಗೀರಥ ಎಂದರೆ ತಪ್ಪಾಗಲಾರದು. ಕೇಂದ್ರ ಸರ್ಕಾರ ಇವರನ್ನು ಗೌರವಿಸಿರುವುದು ಹೆಮ್ಮೆಯ ವಿಷಯವಾಗಿದೆ.

ಅಬ್ದುಲ್ ಖಾದರ್: ನವಲಗುಂದ ತಾಲ್ಲೂಕು ಅಣ್ಣಿಗೇರಿಯವರು ಇವರು. ಕೃಷಿ ಉಪಕರಣಗಳನ್ನು ತಯಾರು ಮಾಡುವುದರಲ್ಲಿ ನಿಪುಣರು ಆರಂಭಿಕ ದಿನಗಳಲ್ಲಿ ಸಾಕಷ್ಟು ಹಣವನ್ನು ಕಳೆದುಕೊಂಡಿದ್ದಾರೆ. ರೈತರಿಗೆ ಬೇಕಾದ 40ಕ್ಕೂ ಹೆಚ್ಚು ಉಪಕರಣಗಳನ್ನು ಸಿದ್ಧಪಡಿಸಿದ್ದಾರೆ. 5 ಕೃಷಿ ಕೆಲಸಗಳನ್ನು ಒಂದೇ ಉಪಕರಣ ಬಳಸಿ ಮಾಡಬಹುದಾಗಿದೆ. ಇವರು ತಮ್ಮ ಗ್ರಾಮದಲ್ಲೇ ವಿಶ್ವಶಾಂತಿ ಕೃಷಿ ಕೇಂದ್ರ ಸ್ಥಾಪಿಸಿ ರೈತರಿಗೆ ತಾಂತ್ರಿಕ ತರಬೇತಿ ನೀಡುತ್ತಿದ್ದಾರೆ.

ಇದೇ ರೀತಿ ಪ್ರೊ. ಅಯ್ಯಪ್ಪನ್ ಕೃಷಿ ರಂಗದಲ್ಲಿ ಅತ್ಯುನ್ನತ ಸಂಶೋಧನೆ ಕೈಗೊಂಡವರು. ಮೀನುಗಾರಿಕೆಯಲ್ಲಿ ಹೆಚ್ಚಿನ ಅಧ್ಯಯನ ನಡೆಸಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದವರು ಅವರಿಗೆ ಈ ಬಾರಿ ಪ್ರಶಸ್ತಿ ನೀಡಲಾಗಿದೆ ಹೊಸಹಳ್ಳಿಯ ಹೆಚ್.ಆರ್ ಕೇಶವಮೂರ್ತಿ ಗಮಕ ಕಲಾವಿದರು ಇವರ ಧ್ವನಿ ಮುದ್ರಿಕೆಗಳು ಪ್ರತಿ ಮನೆಯಲ್ಲೂ ಇದ್ದೇ ಇರುತ್ತದೆ. ಉನ್ನತ ಸಾಹಿತ್ಯ ಕೃತಿಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಗಮಕ ಕಲೆಯ ಮೂಲಕ ಹೇಳುವುದು ಇವರ ವಿಶೇಷತೆ.

ದಲಿತಕವಿ ಸಿದ್ದಲಿಂಗಯ್ಯನವರಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಲಾಗಿದೆ. ಸಿದ್ದಲಿಂಗಯ್ಯನವರು ತಮ್ಮ ಸಾಹಿತ್ಯದ ಮೂಲಕ ಬಂಡಾಯದ ಕಿಡಿ ಹತ್ತಿಸಿದವರು. ಇವರು ಎರಡು ಬಾರಿ ವಿಧಾನ ಪರಿಷತ್ತ ಸದಸ್ಯರಾಗಿದ್ದರು, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು, ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿಯ ಸದಸ್ಯರಾಗಿದ್ದರು. ಹಲವಾರು ಕೃತಿಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಲೋಕ ಸದಾಕಾಲ ಸ್ಮರಿಸುವಂತ ಕೊಡುಗೆ ನೀಡಿದ್ದಾರೆ. ಕೇಂದ್ರ ಸರ್ಕಾರ ಮುಂದಿನ ದಿನಗಳಲ್ಲಿ ಹೀಗೆ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಸೇವೆಯ ಕ್ಷೇತ್ರದಲ್ಲಿ ಅವಿರತ ಸೇವೆ ಮಾಡುತ್ತಿರುವ ವ್ಯಕ್ತಿಗಳನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಬೇಕು. ರಾಜ್ಯ ಸರ್ಕಾರವೂ ಕೂಡ ರಾಜೋತ್ಸವ ಪ್ರಶಸ್ತಿಗೆ ಆರ್ಹರನ್ನು ಆಯ್ಕೆ ಮಾಡುವಾಗ ಇದೇ ಮಾನದಂಡವನ್ನು ಅನುಸರಿಸುವುದು ಸೂಕ್ತ.

ಕಿರಣ್ ಕುಮಾರ್ ಪಿ., ಪ್ರಥಮ ಎಂಎ–ಎಂಸಿಜೆ

ಗರುಡಗಮನ ವೃಷಭವಾಹನ ಎಂಬ ದೃಶ್ಯಕಾವ್ಯ

ನಿರ್ದೇಶನ: ರಾಜ್ ಬಿ. ಶೆಟ್ಟಿ
ನಿರ್ಮಾಣ: ಪರಮ್ವಾ ಸುಡಿಯೋಸ್
ಬಿಡುಗಡೆ: ನವೆಂಬರ್ 19, 2021

'ಒಂದು ಮೊಟ್ಟೆಯ ಕಥೆ'ಯಂತಹ ಫ್ಯಾಮಿಲಿ ಎಂಟರ್‌ಟೈನರ್ ಸಿನಿಮಾವನ್ನು ನೀಡಿದ್ದ ರಾಜ್ ಬಿ. ಶೆಟ್ಟಿ ತಮ್ಮ ನಿರ್ದೇಶನದ ಎರಡನೇ ಸಿನಿಮಾವಾಗಿ 'ಗರುಡಗಮನ ವೃಷಭವಾಹನ' ಎಂಬ ಕ್ರೈಮ್ ಥ್ರಿಲ್ಲರ್ ಚಿತ್ರವನ್ನು ಪ್ರೇಕ್ಷಕರ ಮುಂದಿಟ್ಟಿದ್ದಾರೆ.

'ಗರುಡಗಮನ ವೃಷಭವಾಹನ' ಹೆಸರೇ ಸೂಚಿಸುವಂತೆ ಶಿವನು ಸಂಹಾರ ಮಾಡುತ್ತಾ ಬಂದರೆ ಹರಿಯು ಅದನ್ನು ನೋಡುತ್ತಾ ಬರುವುದನ್ನು ಚಿತ್ರದುದ್ದಕ್ಕೂ ಗಮನಿಸಬಹುದು. ಚಿಕ್ಕ ಮಕ್ಕಳಿಂದ ಆರಂಭವಾಗುವ ಈ ಚಿತ್ರ ಮಕ್ಕಳಿಂದಲೇ ಅಂತ್ಯವನ್ನು ಕಾಣುತ್ತದೆ. ಮಂಗಳೂರಿನ ಮಂಗಳಾದೇವಿ ಪ್ರದೇಶದ ಹಿನ್ನೆಲೆಯಲ್ಲಿ ಆರಂಭವಾಗುವ ಈ ಚಿತ್ರದಲ್ಲಿ ಇಡೀ ಕರಾವಳಿಯನ್ನು ಅದ್ಭುತವಾಗಿ ಚಿತ್ರಿಸಲಾಗಿದೆ.

ಶಿವ ಚಿಕ್ಕ ವಯಸ್ಸಿನಲ್ಲಿ ಅನಾಥವಾಗಿ ಸಿಗುತ್ತಾನೆ. ಅಲ್ಲಿಂದ ಶಿವ ಮತ್ತು ಹರಿಯ ಸ್ನೇಹ ಶುರುವಾಗುತ್ತದೆ. ನಂತರ ಇಡೀ ಮಂಗಳಾದೇವಿಯನ್ನೇ ಆಳಲು ಸಜ್ಜಾಗುತ್ತಾ–ರೆ. ಶಿವನನ್ನು ಮುಂದಿಟ್ಟುಕೊಂಡು ಹರಿಯು ಆಡಳಿತ ಶುರುಮಾಡುತ್ತಾನೆ.

ಇಲ್ಲಿ ಹೊಸ ರೀತಿಯ ಕ್ರೈಂ ಡ್ರಾಮ ಎಂಟರ್‌ಟೈನರ್ ವರ್ಕೌಟ್ ಆಗಿದೆ ಮತ್ತು ನೋಡುಗರ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರದಂತೆ ಚಿತ್ರಿಸಿರುವುದು ವಿಶೇಷ.

ಈ ಸಿನಿಮಾದ ಮತ್ತೊಂದು ವಿಶೇಷವೆಂದರೆ ರಾಜಕೀಯ ಮತ್ತು ಪೋಲೀಸ್ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ತೆರೆಯ ಮೇಲೆ ತಂದಿರುವುದು. ಪ್ರತಿಯೊಂದು ದೃಶ್ಯವೂ ಕಲಾತ್ಮಕವಾಗಿ ಮೂಡಿಬಂದಿದ್ದು, ಅದಕ್ಕೆ ಪೂರಕವಾಗಿ ಹಿನ್ನೆಲೆ ಸಂಗೀತ ಮತ್ತು ಕ್ಯಾಮೆರಾ ಕೈಚಳಕ ಕಾಣುತ್ತದೆ. ಒಟ್ಟಾರೆಯಾಗಿ ಇದೊಂದು ವಿಭಿನ್ನ ರೀತಿಯ ಕ್ರೈಂ ದೃಶ್ಯಕಾವ್ಯ.

ಬಾಬು ಡಿ., ಪ್ರಥಮ ಎಂಎ–ಎಂಸಿಜೆ

ಬಯಕೆ

ಹಸಿದವನಿಗೆ ಮೃಷ್ಟಾನ್ನ ಭೋಜನದ ಬಯಕೆ
ಶ್ರೀಮಂತನಿಗೆ ಬಹಳ ಹಣ ಗಳಿಸುವ ಬಯಕೆ
ತರುಣನಿಗೆ ಸುಂದರ ಯುವತಿಯ ವರಿಸುವ ಬಯಕೆ
ನನಗೆ ಮಾತ್ರ ಬತ್ತಿದ ಜ್ಞಾನದೊಡಲನ್ನು ತುಂಬಿಸುವ ಬಯಕೆ

ಬಿ. ಹೆಚ್. ಪ್ರದೀಪ್‌ಬೀರಸಂದ್ರ
ಪ್ರಥಮ ಎಂಎ–ಎಂಸಿಜೆ

ಮಲತಾಯಿ ಅಲ್ಲ, ಮಮತಾಮಯಿ...

ಕಥಾಸಮಯ

ಬ್ಯಾಸಗಿ ದಿವಸಕ ಬೇವಿನ ಮರ ತಂಪ।
ಭೀಮರತಿಯೆಂಬ ಹೊಳೆ ತಂಪ।
ಹಡೆದವ್ವ ನೀ ತಂಪ ನನ್ನ ತವರೀಗೆ ॥

ನಾನೊಬ್ಬ ನಿರುದ್ಯೋಗಿ. ಕೆಲಸ ಹುಡುಕುತ್ತಾ ಬೆಂಗಳೂರಿನತ್ತ ಹೊರಟವರ ಗುಂಪಲ್ಲಿ ನಾನು ಒಬ್ಬ. ಸುಮಾರು ಎರಡು ತಿಂಗಳ ಸತತ ಹುಡುಕಾಟದಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಗಿಟ್ಟಿಸಿಕೊಂಡೆ. ಅಲ್ಲಿ ಮೊದಲು ಪರಿಚಯವಾಗಿದ್ದು ರಮೇಶ. ಹುಟ್ಟು ವರಟು ಮನುಷ್ಯ. ಆದರೆ ಮನಸ್ಸು ಒಳ್ಳೆಯದು. ಅವನು ಹಾಸನ ಜಿಲ್ಲೆಯ ಒಂದು ಹಳ್ಳಿಯವನು. ಅವರಪ್ಪ ರಾಮಣ್ಣ, ಅಮ್ಮ ಸರೋಜ. ಅವರು ಹಳ್ಳಿಯಲ್ಲಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು.

ರಮೇಶನ ತಂಗಿಯ ಮದುವೆ ನಿಶ್ಚಯವಾಗಿದ್ದ ಕಾರಣ ನಾನು ನಾಲ್ಕು ದಿನಗಳ ಮುಂದೆಯೇ ಆ ಹಳ್ಳಿಗೆ ಹೋಗಬೇಕಿತ್ತು, ಹೋದೆ. ರಮೇಶನ ಮನೆ ಅಷ್ಟು ದೊಡ್ಡದು ಅಲ್ಲ, ತೀರ ಚಿಕ್ಕದೂ ಅಲ್ಲ. ಸುಮಾರು ಐದಾರು ಮಂದಿ ಅರಾಮಾಗಿ ಮಲಗುವಂತಹ ಒಂದು ಪುಟ್ಟ ಮನೆ. ಅದಕ್ಕೂ ಒಂದು ಹೆಸರುಂಟು 'ಶ್ರೀನಿಧಿ ನಿವಾಸ'. ಶ್ರೀನಿಧಿ ಎಂದರೆ ಅವನ ತಂಗಿಯ ಹೆಸರು.

ಆ ಮನೆಗೆ ಒರಗಿಕೊಂಡಂತೆ ಒಂದು ಪುಟ್ಟ ಗುಡಿಸಲು ಇತ್ತು. ಅದರಲ್ಲಿ ಮೂವತ್ತರ ಪ್ರಾಯದ ವಿಧವೆ ಮತ್ತು ಎಂಟು ವರ್ಷದ ಹುಡುಗಿ ವಾಸವಿದ್ದರು. ಆ ತಾಯಿಯ ಹೆಸರು ಈರಕ್ಕ, ಹುಡುಗಿ ಸುಬ್ಬಮ್ಮ. ಸಂಬಂಧದಲ್ಲಿ ಈರಕ್ಕ ಸುಬ್ಬಮ್ಮಳ ಹಡೆದ ತಾಯಿ ಅಲ್ಲ ಎಂಬುದು ನನಗೆ ಗೊತ್ತಿತ್ತು.

ಆ ಪುಟ್ಟ ಪೋರಿ ತುಂಬಾ ಜಾಣೆ, ತುಂಟಿ, ಅವಳನ್ನು ಎಲ್ಲರು ಸುಬ್ಬು ಸುಬ್ಬು ಎಂತಲೇ ಪ್ರೀತಿಯಿಂದ ಕರೆಯುತ್ತಿದ್ದರು. ಈರಕ್ಕ ಬೆಳಗ್ಗೆ ಅಡುಗೆ ಮಾಡಿಟ್ಟು, ಕೆಲಸಕ್ಕೆಂದು ಆರಕ್ಕೆ ಮನೆ ಬಿಟ್ಟರೆ ಹಿಂದಿರುಗುತ್ತಿದ್ದು ಸಂಜೆ ಐದಕ್ಕೆ. ಅಡುಗೆ ಅಷ್ಟಾಗಿ ಕಲಿತಿರಲಿಲ್ಲದಿದ್ದರೂ ಸುಬ್ಬು ಬೆಳಗಿನ ಜಾವ ಐದಕ್ಕೆ ಎದ್ದು ಗುಡಿಸಲ ಮುಂದೆ ಕಸ ಗುಡಿಸಿ, ರಂಗೋಲಿ ಬಿಡಿಸಿ, ಪಾತ್ರೆ ತೊಳೆದು ಎಲ್ಲಾ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ತನ್ನ ಚಿಕ್ಕಮ್ಮಳಿಗೆ ಸಹಾಯ ಮಾಡುತ್ತಿದ್ದಳು.

ಒಂಭತ್ತಕ್ಕೆ ಸರಿಯಾಗಿ ಶಾಲೆಗೆ ಹೋಗುತ್ತಿದ್ದಳು. ಸಂಜೆ ಶಾಲೆಯಿಂದ ಬಂದವಳೇ ಮನೆಗೆಲಸವನ್ನು ಮುಗಿಸಿಕೊಂಡು, ರಮೇಶನ ಮನೆಯಂಗಳದಲ್ಲಿ ತನ್ನ ಪಾಡಿಗೆ ಓದುತ್ತಾ

ಕುಳಿತುಕೊಳ್ಳುತ್ತಿದ್ದಳು. ರಮೇಶನ ತಾಯಿ ಸರೋಜಮ್ಮನವರು ಸುಬ್ಬು ಓದುವುದನ್ನು ನೋಡಿ ಕತ್ತಲಾಗುತ್ತಿದ್ದಂತೆ ಹೊರಾಂಗಣದ ದೀಪವನ್ನು ಹಚ್ಚುತ್ತಿದ್ದಳು. ಸುಬ್ಬು ಎರಡು ತಾಸುಗಳವರೆಗೆ ಓದಿ, ತನ್ನೆಲ್ಲಾ ಪುಸ್ತಕಗಳನ್ನು ಗುಡಿಸಲಲ್ಲಿ ಭದ್ರ ಪಡಿಸಿ, ಊಟ ಮಾಡಿದ ನಂತರ ಟಿವಿ ನೋಡಲು ರಮೇಶನ ಮನೆಗೆ ಹೋಗುತ್ತಿದ್ದಳು.

ಸರೋಜಮ್ಮನವರ ಜೊತೆ ಗೂಡಿ ಗೀತಾ, ಕಸ್ತೂರಿ ನಿವಾಸ, ಗಟ್ಟಿಮೇಳ ಮತ್ತು ಪುಟ್ಟಕ್ಕನ ಮಕ್ಕಳು ಧಾರವಾಹಿಗಳನ್ನು ನೋಡಿಯೇ ಮಲಗಲು ಹೋಗುತ್ತಿದ್ದಳು. ಇದನ್ನೆಲ್ಲಾ ನೋಡಿ–ದರೂ ಈರಕ್ಕ ಅವಳನ್ನು ಏನೂ ಅನ್ನುತ್ತಿರಲಿಲ್ಲ.

ನಾನು ಮದುವೆಗೆಂದು ಹೋದವನು ಈ ಎಲ್ಲಾ ವಿಷಯ ತಿಳಿದು ಅಚ್ಚರಿ ಆಯ್ತು. ಸಣ್ಣ ವಯಸ್ಸಿನ ಬಾಲೆ, ಈ ತರಹದ ಕೆಲಸಗಳನ್ನು ಮಾಡುತ್ತಾಳ ಎಂದು. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶದಲ್ಲಿನ ಮಕ್ಕಳು ತಮ್ಮ ಪೋಷಕರ ಮಾತುಗಳನ್ನು ಕೇಳುವುದೇ ಅಪರೂಪ. ಈ ಹುಡುಗಿಯ ಪಾತ್ರ ನನಗೆ ವಿಶೇಷವಾಗಿ ಕಾಣತೊಡಗಿತು.

ಆದ್ದರಿಂದ ಇದರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಅಸಕ್ತಿ ಹುಟ್ಟಿತು. ಅದಕ್ಕಾಗಿ ಈರಕ್ಕಳ ಬಳಿ ಆಕೆಯ ಬಗ್ಗೆ ವಿಚಾರಿಸಿದೆ. ಆದರೆ ನನಗೆ ಗೊತ್ತಾಗಿದ್ದೆ ಬೇರೆ. ಅಲ್ಲಿ ಸುಬ್ಬಮ್ಮ ಅವರಕ್ಕನ ಮಗಳು ಎಂಬ ಸುದ್ದಿ. ಅವರಕ್ಕ ಸುಬ್ಬು ಎರಡು ವರ್ಷದ ಮಗುವಿದ್ದಾಗ ಆಕೆ ಅದ್ಯಾವುದೋ ವಿಚಿತ್ರ ಕಾಯಿಲೆಗೆ ತುತ್ತಾಗಿ ತೀರಿಕೊಂಡಳಂತೆ. ಆಕೆಯ ಮರಣದ ನಂತರ ಈರಕ್ಕಳೇ ತನ್ನಕ್ಕಳ ಜವಾಬ್ದಾರಿಯನ್ನು ವಹಿಸಿಕೊಂಡಳಂತೆ. 'ಈ ವಿಚಾರ ಆ ಹಳ್ಳಿಯ ಕೆಲವರಿಗೆ ಮಾತ್ರ ಗೊತ್ತು. ಸುಬ್ಬುಗೆ ಈ ವಿಚಾರದ ಬಗ್ಗೆ ಗೊತ್ತಿಲ್ಲ, ನೀವು ಹೇಳಬೇಡಿ' ಎಂದು ಈರಕ್ಕ ಮನವಿ ಮಾಡಿಕೊಂಡಳು.

ತನ್ನ ಹೆತ್ತವಳು ತೀರಿಕೊಂಡ ವಿಚಾರ ಸುಬ್ಬುಗೆ ಗೊತ್ತಿಲ್ಲ. ಅದ್ದರಿಂದ ಈರಕ್ಕಳನ್ನೇ ಸ್ವಂತ ತಾಯಿಯೆಂದು ಭಾವಿಸಿದ್ದಾಳೆ. ಅವಳ ಕಷ್ಟದಲ್ಲಿ ಜೊತೆಯಾಗಿದ್ದಾಳೆ.

ಇಷ್ಟಕ್ಕೂ ಈ ಕತೆ ಹೇಳಲಿಕ್ಕೆ ಹೊರಟಿದ್ದು, ತಾಯಿಯ ಪ್ರೀತಿಗೆ ತ್ರಿಮೂರ್ತಿಗಳೇ ಶರಣಾಗಿದ್ದಾರೆ. ಅಂತಹ ಕರುಣಾಮಯಿ, ಮಕ್ಕಳ ಮೇಲೆ ಅತಿಹೆಚ್ಚು ಪ್ರೀತಿ, ವಾತ್ಸಲ್ಯವನ್ನು ತೋರಿಸುವ ಮುಗ್ಧ ಮನಸ್ಸುಳ್ಳವಳು ಮಾತೃಮೂರ್ತಿ. ಆದರೆ ಈ ಪುರುಷಪ್ರಧಾನ ಸಮಾಜದಲ್ಲಿ ಮಲತಾಯಿಯ ಮಮತೆ ಕ್ಷೀಣಿಸುವ, ಅಲ್ಲಗಳೆಯುವ ಸಮಾಜದಲ್ಲಿ ಸುಬ್ಬಮ್ಮಳ ಜೀವನದಲ್ಲಿ ಈರಕ್ಕ ಹಡೆದವ್ವಗಳಿಗಿಂತ ಒಂದು ಕೈ ಮೇಲೆಯೇ ಎಂದು ಹೇಳಬಹುದು. ಈರಕ್ಕ ಮತ್ತು ಸುಬ್ಬುಳ ನಡುವಿನ ಬಾಂಧವ್ಯ ಸದಾ ಕಾಲ ಹೀಗೆ ಇರಲಿ ಎಂದು ಹಾರೈಸುತ್ತೇನೆ.

ಗೋಪಾಲ ಪುರುಷೋತ್ತಮ
ಪ್ರಥಮ ಎಂಎ–ಎಂಸಿಜೆ

ಭಾಷೆ: ಕಂದನ ಬೆರಳು ಹಿಡಿದ ಅಮ್ಮ

ಭಾಷೆಯನ್ನು ಪ್ರೀತಿಸಿದರೆ ಮಾತ್ರ ಕಲಿಯಲು ಸಾಧ್ಯ. ಅನ್ಯ ಭಾಷೆಯನ್ನು ಕಲಿಯುವ ಭರದಲ್ಲಿ ನಮ್ಮ ಭಾಷೆಯ ಬಗೆಗಿನ ಅಭಿಮಾನ ಕಡಿಮೆಯಾಗಬಾರದು.

"ಭಾಷೆಯನ್ನು ರೂಪಿಸುವ ಶಬ್ದವೆಂಬ ಜ್ಯೋತಿ ಬೆಳಗದಿದ್ದರೆ ಈ ಲೋಕವೆಲ್ಲ ಅಂಧಕಾರದಲ್ಲಿ ಮುಳುಗಿ ಹೋಗುತ್ತದೆ' ಎಂಬ ಸಂಸ್ಕೃತ ಕಾವ್ಯ ಮೀಮಾಂಸಕರ ಮಾತು ನೆನಪಿಗೆ ಬರುತ್ತಿದೆ.

ಜ್ಞಾನಕ್ಕೆ ಭಾಷೆ ಒಂದು ಆವರಣ ಎನಿಸುತ್ತದೆ. ಈ ಆವರಣ ಮೋಹಕವಾಗಿದ್ದಷ್ಟು ಜ್ಞಾನದ ಪ್ರಸರಣ ಸುಲಭ. ಜ್ಞಾನಕ್ಕೆ ಭಾಷೆ ವಾಹಕ. ನಮ್ಮ ಭಾಷೆ ಇತರ ಭಾಷಾ ಬಾಂಧವರಿಗೆ ನಾವು ಕಂಡ ಸತ್ಯದ ದರ್ಶನ ಸಾಧ್ಯವಾಗುವಂತೆ ಮಾಡುತ್ತದೆ.

ಭಾಷೆಯು ಮಾಹಿತಿಯ ಸಂವಹನೆಗೆ ನಿರೂಪಿತವಾಗಿರುವ ಸಂಕೇತಗಳ ಪದ್ಧತಿ. ಈ ಸಂಕೇತಗಳನ್ನು ಮೌಕಿಕವಾಗಿ, ಲಿಖಿತವಾಗಿ ಬಳಸುವುದು ರೂಢಿಯಲ್ಲಿದೆ. ಉತ್ತಮವಾದ ಭಾಷೆ ಮಾನವನ ಅನುಪಮ ಗುಣಗಳಲ್ಲಿ ಒಂದಾಗಿದೆ. ಹೊಸ ಭಾಷೆಯೊಂದನ್ನು ಕಲಿಯುವುದು ಸುಲಭದ ಮಾತಲ್ಲ. ಆದರೆ ಅದರಿಂದ ಸಾಕಷ್ಟು ಪ್ರಯೋಜನಗಳಿವೆ.

ನಾವು ಹೊಸತಾದ ಭಾಷೆಯೊಂದನ್ನು ಕಲಿಯಲು ನಮಗೆ ಬೇರೆ ಬೇರೆ ಕಾರಣಗಳಿರಬಹುದು. ಕೆಲವರು ಕಾಣದ ಊರಿನಲ್ಲಿ ವ್ಯವಹಾರಕ್ಕಾಗಿ ಭಾಷೆ ಕಲಿತರೆ ಇನ್ನೂ ಕೆಲವರು ಶೈಕ್ಷಣಿಕ ಉದ್ದೇಶದಿಂದ ಹೊಸ ಭಾಷೆ ಕಲಿಯಬೇಕಾಗುತ್ತದೆ. ಭಾಷೆ ನಮ್ಮ ಮುಂದೆ ಹಲವು ಅವಕಾಶಗಳನ್ನು ತೆರೆದಿಡುತ್ತದೆ. ಬಹುಭಾಷೆಗಳ ಜ್ಞಾನ ಇಂದಿನ ದಿನದ ಪ್ರಮುಖ ಕೌಶಲ್ಯವಾಗಿದೆ. ಭಾಷೆಯನ್ನು ಕಲಿಯುವಾಗ ಓದುವುದು ಬರೆಯುವುದು ಮತ್ತು ಮಾತನಾಡುವುದನ್ನು ಯಾವಾಗಲೂ ಶಿಫಾರಸು ಮಾಡಲಾಗುತ್ತದೆ. ವೃತ್ತಪತ್ರಿಕೆ, ಸಾಹಿತ್ಯ, ಸಂಗೀತ, ಸಿನಿಮಾ ಹೀಗೆ ಎಲ್ಲವೂ ಭಾಷೆಯನ್ನು ಕಲಿಯುವ ಸಾಧನಗಳೇ. ಹೊಸ ಭಾಷೆಯನ್ನು ಕಲಿಸುವ ಸಂಸ್ಥೆಗಳು ಸಹ ಇದ್ದು, ಇವು ಹೊಸ ಭಾಷೆಗಳನ್ನ ಕಲಿಸುವ ಮೂಲಕ ಹೊಸದೊಂದು ಲೋಕದ ಅನುಭವ ಮಾಡಿಕೊಡುತ್ತವೆ.

ನಾನು ಹೊಸದೊಂದು ಭಾಷೆ ಕಲಿಯಲು ಕಾರಣವಾದದ್ದು ಈ ಘಟನೆ: ಉತ್ತರಖಾಂಡ್‌ನ ಕಾಶೀಪುರದ ರಾಧೆ ಹರಿ ಸರ್ಕಾರಿ ಪಿಜಿ ಕಾಲೇಜಿಗೆ ಕನ್ನಡ ಸಂಸ್ಕೃತಿಯನ್ನು ಪರಿಚಯಿಸುವ ಅವಕಾಶ ನನಗೆ ದೊರೆಯಿತು. ಪರನಾಡಲ್ಲಿ ಕನ್ನಡದ ಬಾವುಟವನ್ನು ಹಾರಿಸುವ ಆಸೆ ಇದ್ದರೂ ಭಾಷೆ ಬರದ ಊರಿಗೆ ಅಂಜಿಕೆಯಿಂದಲೇ ಹೊರಟೆವು. ರೈಲಿನಲ್ಲಿ ಪ್ರಯಾಣಿಸುವಾಗ ಭಾಷೆ ಬರದೆ ಸೀಟು ಕಳೆದುಕೊಂಡು ಪರದಾಡಿದಾಗ ಮಾನವನ ಜೀವನಕ್ಕೆ ಭಾಷೆ ಎಷ್ಟು ಮುಖ್ಯ ಎಂದು ನಾನು ತಿಳಿದುಕೊಂಡೆ. ಇಲ್ಲಿಂದ ಮರಳಿ ನಮ್ಮ ಊರಿಗೆ ಹೋಗುವಷ್ಟರಲ್ಲಿ ಕನಿಷ್ಟ ಪಕ್ಷ ವ್ಯವಹರಿಸುವಷ್ಟಾದರೂ ಹಿಂದಿ ಕಲಿಯಲು ಅಂದೇ ನಿಶ್ಚಯಿಸಿದೆ. ಅಂದಿನಿಂದ 10 ದಿನಗಳ ಕಾಲದವರೆಗೂ ಸ್ವಲ್ಪ ಸ್ವಲ್ಪ ಹಿಂದಿಯನ್ನು ಮಾತನಾಡಲು ನಾನು ಪ್ರಯತ್ನಿಸಿದೆ. ಆಗಾಗ ಅಲ್ಲಿನ ವಿದ್ಯಾರ್ಥಿಗಳೊಂದಿಗೂ ಸಹ ನಾನು ಹಿಂದಿಯಲ್ಲಿ ಮಾತಾನಾಡುತ್ತಿದ್ದೆ. ಮನೆಯಿಂದ ದೂರವಿದ್ದ ನನ್ನನ್ನು ಅವರ ವಿಶ್ವಾಸ ಸಂತೈಸುತ್ತಿತ್ತು. ಅಲ್ಲಿನ ಭಾಷೆ ಮತ್ತು ಅಲ್ಲಿನ ಸಂಸ್ಕೃತಿ, ಉಡುಗೆ–ತೊಡುಗೆ ಹಾಗೂ ಊಟ ಉಪಚಾರಗಳನ್ನು ನಮ್ಮ ಸಂಸ್ಕೃತಿಯೊಂದಿಗೆ ಹೋಲಿಸಿ ಅರ್ಥೈಸಿಕೊಳ್ಳುತ್ತಿದ್ದೆ. ಅಲ್ಲಿನ ಜನಪ್ರಿಯ ವಿಡು ಸಾಕೋ ಹಾಡು ನನಗೆ ಇಷ್ಟವಾಯಿತು. ಹೀಗೆ ಹಿಂದಿ ಭಾಷೆಯನ್ನು ಕಲಿಯುವುದು ನನಗೆ ಸುಲಭವಾಯಿತು.

ಮಾತೃಭಾಷೆ, ನಾವು ಹುಟ್ಟಿದ ಭೂಮಿಯಲ್ಲಿ ಆಡುವ